# ಪ್ರಜಾಪ್ರಭುತ್ವದ ನವೀಕರಣ

ಜಗತ್ತಿನಲ್ಲಿಯೆ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಎಂದೆನಿಸಿರುವ ಭಾರತ ಮತ್ತೊಮ್ಮೆ ಗೆದ್ದಿದೆ. ಎಪ್ಪತ್ತರ ದಶಕದಿಂದೀಚೆಗೆ ಹೊಸ ಪ್ರಯೋಗಗಳಿಗೆ ಎಡೆ ಮಾಡಿಕೊಡುತ್ತಿರುವ ಭಾರತೀಯ ಪ್ರಜೆ ಅತಿ ಚಾಣಾಕ್ಷ ಮತದಾರ ಅನ್ನಿಸಿಕೊಂಡಿದ್ದಾನೆ. ಗಣತಂತ್ರದ ಈ 67 ವರ್ಷಗಳಲ್ಲಿ ಪ್ರಜಾಪ್ರಭುತ್ವ ಪ್ರಬಲವಾಗಿ ಬೆಳೆದು ಸಫಲತೆಯನ್ನು ಕಂಡಿದೆಯೆ ಎಂಬುದೆ ಪ್ರಶ್ನೆ. ಏಕಾಂಗಿ ಹೆಣ್ಣೊಬ್ಬಳು ಮಧ್ಯರಾತ್ರಿಯಲ್ಲಿ ನಿರ್ಭೀತವಾಗಿ ನಡೆದಾಡುವಂತಾದಾಗ ಮಾತ್ರ ಸ್ವಾತಂತ್ರ್ಯಕ್ಕೆ ಅರ್ಥವಿದೆ ಎಂಬಂತಹ ಗಾಂಧೀಜಿಯವರ ಪ್ರಖ್ಯಾತ ಹೇಳಿಕೆ ಇಂದಿನ ಘಟನಾವಳಿಗಳನ್ನು ಗಮನಿಸಿದಾಗ ಅರ್ಥಹೀನ ಎನಿಸುತ್ತದೆ. ನಡುಬೀದಿ ಅಲ್ಲಿರಲಿ, ನಗರ ಪ್ರದೇಶಗಳಲ್ಲಿಯೂ ಮನೆಯ ಒಳಗಡೆ ಒಬ್ಬಳೇ ಹೆಂಗಸು ವಾಸಿಸಲಾರದಂತಹ ದುಸ್ತರವಾದ ಪರಿಸ್ಥಿತಿ ಇದೆ. ಬಡತನ ಮತ್ತು ಅಸಮಾನತೆಗಳಿಂದ ಸಮಾಜದ ನೈತಿಕ ಮಟ್ಟ ಕುಸಿಯುತ್ತದೆ ಎಂಬುದು ಇದರಿಂದ ಸಾಬೀತಾಗುತ್ತದೆ.

ಹಲವು ಭಾಷೆಗಳು, ಹಲವು ಜನಾಂಗ, ಧರ್ಮಗಳು, ಅಸಂಖ್ಯಾತ ಜಾತಿಗಳು, ವಿಭಿನ್ನ ಸಂಸ್ಕೃತಿ, ಆಚಾರ ವಿಚಾರಗಳಿಂದ ಭಾರತ ವೈವಿಧ್ಯಮಯ ದೇಶ ಅನ್ನಿಸಿಕೊಂಡಿದೆ. ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿದೆ ಎಂಬ ಪ್ರಶಂಸೆಯ ಮಾತುಗಳು ಭಾರತಕ್ಕೆ ಸಲ್ಲುತ್ತವೆ. ಅನೇಕತೆಯನ್ನು ಸದೃಢವಾಗಿ ನಿಭಾಯಿಸಿದ್ದರಿಂದಲೇ ಸ್ವಾತಂತ್ರ್ಯಕ್ಕಾಗಿ ನಡೆಸಿದ ಚಳವಳಿಯಲ್ಲಿ ಗೆಲುವು ಸಾಧ್ಯವಾಯಿತು ಎಂಬುದನ್ನು ಅಲ್ಲಗಳೆಯಲಾಗದು. ಭಾರತೀಯ ಅನೇಕತೆಯನ್ನು ಹಗುರ ಧಾಟಿಯಲ್ಲಿ ವಿಶ್ಲೇಷಿಸುತ್ತಾ ಎ.ಕೆ.ರಾಮಾನುಜನ್ ಐರಿಷ್ ಮಾತನ್ನು ಉದಾಹರಿಸಿ ಅದೊಂದು ಪ್ಯಾಂಟಿನಂತೆ; ಮೇಲ್ಭಾಗದಲ್ಲಿ ಏಕತೆ, ಕೆಳಭಾಗದಲ್ಲಿ ಅನೇಕತೆಯನ್ನು ಹೇಳುತ್ತದೆ ಎಂದಿದ್ದರು. ಲೇಖಕ ಸುನಿಲ್ ಖಿಲ್ನಾನಿ, ಅದು ನಮ್ಮ ಧೋತಿಯ ಹಾಗೆ ಮೇಲ್ಭಾಗದಲ್ಲಿಯೂ ಎಣೆಯಿಲ್ಲದ ಮಡಿಕೆಗಳಿರುವಂತೆ ವೈವಿಧ್ಯತೆಯನ್ನು ಹೊಂದಿದೆ ಎನ್ನುತ್ತಾರೆ.

ಅದೇನೇ ಇರಲಿ. ಸ್ವಾತಂತ್ರ್ಯ ಮತ್ತು ಸಮಾನತೆ ಒಂದೇ ನಾಣ್ಯದ ಎರಡು ಮುಖಗಳು. ಇವೆರಡೂ ಸಮನಾಗಿದ್ದರೆ ಮಾತ್ರ ನಾಣ್ಯ ಚಲಾವಣೆಯಲ್ಲಿ ಇರುತ್ತದೆ. ಭಾರತದಲ್ಲಿ ಸಮಾನತೆ ಎಂಬುದು ಕೇವಲ ತೋರುಮುಖವಾಗಿದೆ. ಒಬ್ಬ ವ್ಯಕ್ತಿ, ಒಂದು ಮತ, ಒಂದು ಮೌಲ್ಯ ಎಂಬ ತತ್ವವನ್ನು ರಾಜಕೀಯದಲ್ಲಿ ಒಪ್ಪಿಕೊಳ್ಳಲಾಗಿದೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಸಂರಚನೆ ಒಬ್ಬ ವ್ಯಕ್ತಿ, ಒಂದು ಮೌಲ್ಯ ಎಂಬ ತತ್ವಕ್ಕೆ ವಿರುದ್ಧವಾಗಿದೆ. ಈಗ ರಾಜಕೀಯ ಸಮಾನತೆ ದೊರಕಿದೆ ಆದರೆ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಹಾಗೇ ಉಳಿಯುತ್ತದೆ. ಎಲ್ಲಿಯವರೆಗೆ ಈ ವೈರುಧ್ಯಗಳ ಜೀವನವನ್ನು ಬದುಕುತ್ತಿರಬೇಕು? ಎಂಬ ಪ್ರಶ್ನೆಯನ್ನು ಸ್ವತಃ ಅಂಬೇಡ್ಕರ್ ಅವರೇ ಎತ್ತುತ್ತಾರೆ. ಇದು ಇಂದಿಗೂ ಮುಂದುವರೆದಿದೆ.

ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಅದು ಅಸಮಾನತೆಯನ್ನು ಪೋಷಿಸುತ್ತದೆ ಎಂಬ ಕಾರಣಕ್ಕೆ ಅಂಬೇಡ್ಕರ್ ಕಟುವಾಗಿ ವಿರೋಧಿಸಿದರು. ಆದರೆ ಪಂಚಾಯತ್ ರಾಜ್ ವ್ಯವಸ್ಥೆಗೆ ಒತ್ತು ನೀಡಿದರು. ಗ್ರಾಮ ಮಟ್ಟದಲ್ಲಿ ಅಧಿಕಾರ ವಿಕೇಂದ್ರೀಕೃತಗೊಳ್ಳಬೇಕು ಎಂಬುದು ಅವರ ಕನಸಾಗಿತ್ತು. ಅಂತೆಯೆ ಕೃಷಿ ಕ್ಷೇತ್ರವನ್ನು ಸರ್ಕಾರದ ಹಿಡಿತದಲ್ಲಿರಿಸುವುದು, ಬೃಹತ್ ಉದ್ದಿಮೆಗಳನ್ನು ಸರ್ಕಾರ ನಡೆಸುವುದು ಇತ್ಯಾದಿಗಳಿಂದ ಅವರು ಸಾಮಾಜಿಕ ಪ್ರಜಾಪ್ರಭುತ್ವದ ನೀಲಿ ನಕ್ಷೆಯನ್ನು ತಯಾರಿಸಿದ್ದರು. ನೆಹರೂ ಅವರ ಆಡಳಿತಕ್ಕೆ ಅದೇ ಮುನ್ನೋಟವಿತ್ತೆಂಬುದು ಕಂಡುಬರುತ್ತದೆ. ಆದರೆ ನಂತರದ ದಿನಗಳಲ್ಲಿ ಮುಕ್ತ ಮಾರುಕಟ್ಟೆಯ ಪ್ರಭಾವಕ್ಕೆ ಒಳಗಾದ ಸರ್ಕಾರಗಳು ಬಂಡವಾಳಶಾಹಿಯನ್ನು ಪ್ರೋತ್ಸಾಹಿಸಿದವು. ಈ ವ್ಯವಸ್ಥೆಯಲ್ಲಿ ಹಿಡಿ ಮಂದಿ ಶ್ರೀಮಂತರು ಮತ್ತು ಹೆಚ್ಚು ಬಡವರು ಇರುವುದು ಸಹಜವಾಗಿಯೆ ಇದೆ. ಶೋಷಣೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇತ್ಯಾದಿ ಬಂಡವಾಳಶಾಹಿ ಪ್ರಜಾಪ್ರಭುತ್ವದ ಅಂತರ್ಗತ ಕೊರತೆಗಳು.

ಮಾತು ಬರದವನಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಸಿಕ್ಕಿ ವರ್ಷಗಳೇ ಕಳೆದವು! ಬಡ ಅನಕ್ಷರಸ್ಥನಿಗೆ ವಿದ್ಯೆಯ ಹಕ್ಕು ಸಿಗಲು, ಹಸಿದವನಿಗೆ ಆಹಾರದ ಹಕ್ಕು ಸಿಗಲು 65 ವರ್ಷಗಳು ಕಾಯಬೇಕಾಯಿತು. ಇವು ಅಸ್ಪೃಶ್ಯತೆ ನಿವಾರಣಾ ಕಾಯ್ದೆಯಂತೆ ಹೊರದೇಶಗಳಿಗೆ ತೋರಿಸಿಕೊಳ್ಳಲು ಅಂದರೆ ನಮ್ಮದು ಹಸಿವು ಮುಕ್ತ ರಾಷ್ಟ್ರ, ಅಕ್ಷರಸ್ಥ ಸಮಾಜ ಎಂದು ಹೇಳಿಕೊಳ್ಳಲು ಇರುವ ಕಾಯ್ದೆಗಳಾಗಬಾರದು. ದೃಢ ಸಂಕಲ್ಪದಿಂದ ಕಾರ್ಯಗತಗೊಳಿಸಬೇಕು. ಇನ್ನು ಮೂಲಭೂತ ಸೌಕರ್ಯಗಳ ಮಾತು ದೂರವೇ ಉಳಿಯಿತು. ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಬಹಿರ್ದೆಶೆಗೆ ಹೋಗಲು ರಾತ್ರಿಗಾಗಿ ಕಾಯುವ ಪರಿಸ್ಥಿತಿ ಇದೆ. ಹಳ್ಳಿಶಾಲೆಗಳಲ್ಲಿ ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯಗಳಿಲ್ಲ ಎಂಬ ಕೊರಗು ಅನೇಕ ಕಡೆ ಇದೆ. ಸ್ವಾತಂತ್ರ್ಯೋತ್ತರ ಭಾರತ ತನ್ನ ನಾಗರಿಕರಿಗೆ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಸೋತಿದೆ. ವಿಪರ್ಯಾಸವೆಂದರೆ ಇದೇ ಸಮಯದಲ್ಲಿ ಭಾರತದಲ್ಲಿ ತಯಾರಾದ ಅತ್ಯಂತ ಹೆಚ್ಚು ವೈದ್ಯರು ಮತ್ತು ಎಂಜಿನಿಯರುಗಳನ್ನು ಅಮೆರಿಕ ದೇಶಕ್ಕೆ ರಫ್ತು ಮಾಡಲಾಗಿದೆ!

ಈ ದೇಶದ ಪ್ರತಿಯೊಬ್ಬ ಪ್ರಜೆಯೂ ತಾನು ಚುನಾಯಿಸಿದ ಸರ್ಕಾರದಿಂದ ಅಕ್ಷರ, ಆಹಾರ, ಆರೋಗ್ಯ ಇವುಗಳನ್ನು ತನ್ನ ಹಕ್ಕುಗಳೆಂದು ಪಡೆಯುತ್ತಾನೋ ಆಗ ಮಾತ್ರ ಇಲ್ಲಿ ಪ್ರಜಾಪ್ರಭುತ್ವ ಸಶಕ್ತವಾಗಿದೆ ಎಂದು ಭಾವಿಸಬಹುದು. ಈ ನಿಟ್ಟಿನಲ್ಲಿ ಬಹುನಿರೀಕ್ಷಿತ ಹೊಸ ಆಡಳಿತ ಸಜ್ಜುಗೊಳ್ಳಲಿ ಎಂದು ಹಾರೈಸೋಣ.

■ ಮೂಚಿ

## ಮಾತೇ ಮುತ್ತು

★ಒಂದು ಒಳ್ಳೆಯ ಪುಸ್ತಕವೆಂದರೆ ಅದು ನಮ್ಮೊಳಗೆ ಹೆಪ್ಪುಗಟ್ಟಿದ ಸಮುದ್ರಕ್ಕೆ ಕೊಡಲಿಯಾಗಬೇಕು.

– ಫ್ರಾಂಝ್ ಕಾಫ್ಕಾ

★ಜಗತ್ತಿನ ಅತ್ಯಂತ ಪ್ರಬಲವಾದ ಶಕ್ತಿಯೆಂದರೆ ತಾರುಣ್ಯ ಮತ್ತು ಹೆಣ್ಣಿನ ಸೌಂದರ್ಯ.

–ಚಾಣಕ್ಯ

★ಮಬ್ಬು ಕವಿದರೇನು ನಿನ್ನ ಹಬ್ಬಿದಿರುಳ
ದಾರಿಗೆ, ನಡೆ ಮುಂದಕೆ ಧೈರ್ಯದಿಂದ
ಅರುಣೋದಯ ತೀರಕೆ
ಹಳೆ ನೆನಪುಗಳುದುರಲಿ ಬಿಡು ಬೀಸುವ ಚಳಿ
ಗಾಳಿಗೆ, ತರಗೆಲೆಗಳ ಚಿತೆಯುರಿಯಲಿ
ಚೈತ್ರೋದಯಕೆ

–ಜಿ.ಎಸ್.ಶಿವರುದ್ರಪ್ಪ

★ಮನುಷ್ಯ ಸ್ವಭಾವ ಹಾಲು; ಜಗತ್ತು ಹುಳಿಮಜ್ಜಿಗೆ.

–ಡಿ.ವಿ.ಗುಂಡಪ್ಪ

★ಮಗುವನ್ನು ನಿಮ್ಮ ಸ್ವಂತ ಕಲಿಕೆಗೆ ಮಿತಿಗೊಳಿಸಬೇಡಿ; ಅವನು ಬೇರೊಂದು ಸಮಯದಲ್ಲಿ ಹುಟ್ಟಿದವನು.

–ರವೀಂದ್ರನಾಥ ಠಾಗೋರ್

★ಇಂಗ್ಲಿಷ್ ಭಾಷೆಯು ಭಾರತಕ್ಕೆ ಅಪಾಯ ಮಾಡುತ್ತಿರುವುದಕ್ಕೆ ಅದು ವಿದೇಶಿ ಭಾಷೆ ಎನ್ನುವುದಕ್ಕಿಂತ ಹೆಚ್ಚಾಗಿ ಭಾರತದ ಸಂದರ್ಭದಲ್ಲಿ ಅದು ಯಜಮಾನಿಕೆಯ ಭಾಷೆಯಾಗಿರುವುದೇ ಪ್ರಮುಖ ಕಾರಣ.

–ರಾಮಮನೋಹರ ಲೋಹಿಯಾ

★ಬೇರೆಲ್ಲಾ ಸ್ವಾತಂತ್ರ್ಯಗಳಿಗಿಂತ, ಹೇಳುವ, ತಿಳಿದುಕೊಳ್ಳುವ ಮತ್ತು ಆತ್ಮಸಾಕ್ಷಿಗೆ ಅನುಗುಣವಾಗಿ ವಾದಿಸುವ ಸ್ವಾತಂತ್ರ್ಯವನ್ನು ನನಗೆ ಕೊಡು.

–ಜಾನ್ ಮಿಲ್ಟನ್

★ನಿಶ್ಚಿಂತನಾಗಬೇಕಂತಿ, ಬಹು ದುಶ್ಚಿಂತೆಯೊಳಗೆ
ನೀ ಕುಂತಿ, ಯಾಕೋ ಎಲೋ ನಿನಗೀ ಭ್ರಾಂತಿ?
ನಾಳಿಗಾಗುವುದೀಗಂತಿ, ಆಶಾಪಾಶಗಳ
ಬ್ಯಾಡಂತಿ, ಒಳ್ಳೆ ಮೀಸಲ ನುಡಿ ಮಾತಾಡಂತಿ,
ಭಾಷೆ ಕೊಟ್ಟು ತಪ್ಪ ಬ್ಯಾಡಂತಿ, ಹರಿದಾಸರೊಳಗೆ
ಮನ ನೀಡಂತಿ.

–ಶಿಶುನಾಳ ಷರೀಫ

★ಭೂತ, ಪ್ರೇತಗಳು ನಿಜವಾಗಿಯೂ ಇವೆ. ಅವು ನಮ್ಮೊಳಗೆ ವಾಸಿಸುತ್ತವೆ ಮತ್ತು ಕೆಲವೊಮ್ಮೆ ಗೆಲ್ಲುತ್ತವೆ!

–ಸ್ಟೀಫನ್ ಕಿಂಗ್

★ರಾಜನುಡಿಯೆಂದೊಂದು,
ರಾಷ್ಟ್ರನುಡಿಯೆಂದೊಂದು
ದೇವನುಡಿಯೆಂದೊಂದು ಹತ್ತಿ ಜಗ್ಗಿ
ನಿರಿನಿಟಿಲು ನಿಟಿಲೆಂದು ಮುದಿಮೂಳೆ
ಮುರಿಯುತಿದೆ
ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ!

–ಕುವೆಂಪು